# Call to refer RTI bill to select panel

Swati.Mathur@timesgroup.com

**New Delhi:** The opposition is likely to move a motion in Rajya Sabha for the contentious RTI Amendment Bill to be referred to a select committee to prevent its passage in the upper House.

With the bill being passed in Lok Sabha on Monday amid objections and concerns raised by opposition MPs, all eyes are now on Rajya Sabha, where it is likely to be introduced on Tuesday.

While the government was able to use its majority in the lower House to ensure the bill's passage, it may find the going tougher in Rajya Sabha, where it does not enjoy a majority as yet.


A similar motion to refer the Protection of Human Rights (Amendment) Bill was moved in the house by Nadimul Haque on Monday, but was denied by the Chairman. However, opposition parties have doubled the efforts to scuttle the passage of the RTI Amendment Bill. Sources said Congress, DMK, Samajwadi Party, NCP, Left parties, Bahujan Samaj Party, AAP, TRS and TDP are on board with the decision to demand deeper legislative scrutiny of the RTI bill and will, therefore, push that it be referred to a select committee.

"The government's haste in wanting to pass this bill is a matter of grave concern. We believe that this is an important legislation that needs deeper legislative scrutiny for which it must be sent to a parliamentary select committee," a Rajya Sabha MP said.

A meeting led by Leader of Opposition in Rajya Sabha Ghulam Nabi Azad will be held on Tuesday morning to firm up the strategy.

Opposition parties have contended that the government is attempting to dilute the RTI Act by seizing control of rights to determine the tenure and emoluments of information commissioners.

## Bill to reform medical edu tabled in LS



The government introduced the National Medical Commission (NMC) Bill, 2019 in Lok Sabha on Monday with an aim to reform medical education in the country. The bill — which seeks to repeal the Indian Medical Council Act 1956 — proposes to set up a National Medical Commission to replace the Medical Council of India (MCI) and reforms such as common final year MBBS exam as National Exit Text, which will serve as a licentiate exam for entrance to post graduate medical courses and as a screening test for foreign medical graduates. TNN

ವಿಜಯ ಕರ್ನಾಟಕ



# ಎಂಸಿಐ ಬದಲಿಗೆ ವೈದ್ಯಕೀಯ ಆಯೋಗ

**ಹೊಸದಿಲ್ಲಿ:** ವೈದ್ಯಕೀಯ ಶಿಕ್ಷಣ ಕ್ಷೇತ್ರ ಹಾಗೂ ವೈದ್ಯ ವೃತ್ತಿಯಲ್ಲಿ ಪಾರದರ್ಶಕತೆ ತರುವ ಆಶಯ ದೊಂದಿಗೆ 'ರಾಷ್ಟ್ರೀಯ ವೈದ್ಯಕೀಯ ಆಯೋಗ' ವಿಧೇಯಕವನ್ನು ಕೇಂದ್ರ ಸರಕಾರ ಲೋಕಸಭೆಯಲ್ಲಿ ಸೋಮವಾರ ಮಂಡಿಸಿದೆ.

ಹಾಲಿ ಇರುವ ಭಾರತೀಯ ವೈದ್ಯಕೀಯ ಪರಿಷತ್ ಅನ್ನು (ಎಂಸಿಐ) ವಿಸರ್ಜಿಸಿ ಅದರ ಸ್ಥಾನದಲ್ಲಿ ರಾಷ್ಟ್ರೀಯ ವೈದ್ಯಕೀಯ ಆಯೋಗ ರಚಿಸುವುದು ಈ ವಿಧೇಯಕದ ಪ್ರಮುಖ ತಿರುಳಾಗಿದೆ ಎಂದು ವಿಧೇಯಕ ಮಂಡಿಸಿದ ಆರೋಗ್ಯ ಸಚಿವ ಹರ್ಷವರ್ಧನ್ ಹೇಳಿದರು. ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಸಂಪುಟ ಸಭೆ ತಿದ್ದುಪಡಿ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿತ್ತು.

ರಾಷ್ಟ್ರೀಯ ವೈದ್ಯಕೀಯ ಆಯೋಗ-2019 ತಿದ್ದುಪಡಿ ವಿಧೇಯಕವು 1956ರ ಭಾರತೀಯ ವೈದ್ಯಕೀಯ ಮಂಡಳಿ ಕಾಯಿದೆಯನ್ನು ರದ್ದುಪಡಿಸಲಿದೆ. ವೈದ್ಯಕೀಯ ಕಾಲೇಜುಗಳ ಸೀಟು ಪ್ರವೇಶ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಎಂಬಿಬಿಎಸ್ ಪರೀಕ್ಷೆಯಲ್ಲಿ ಏಕರೂಪತೆ ತರುವುದು ಸೇರಿದಂತೆ ಹಲವು ನಿಯಂತ್ರಣ ಕ್ರಮಗಳು ತಿದ್ದುಪಡಿ ವಿಧೇಯಕದಲ್ಲಿವೆ. ಉದ್ದೇಶಿತ ರಾಷ್ಟ್ರೀಯ ವೈದ್ಯಕೀಯ ಮಂಡಳಿಯು 29 ಸದಸ್ಯರನ್ನು ಹೊಂದಲಿದೆ. ಇದರಲ್ಲಿ 20 ಸದಸ್ಯರು ನಾಮನಿರ್ದೇಶಿತಗೊಂಡರೆ, ಇನ್ನೂ 9 ಸದಸ್ಯರನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುತ್ತದೆ.



## ವಿಧೇಯಕದಲ್ಲಿ ಏನೇನಿದೆ

- 63 ವರ್ಷಗಳಿಂದ ಅಸ್ತಿತ್ವದಲ್ಲಿ ಭಾರತೀಯ ವೈದ್ಯಕೀಯ ಪರಿಷತ್ ಬದಲಿಗೆ ರಾಷ್ಟ್ರೀಯ ವೈದ್ಯಕೀಯ ಆಯೋಗ ಅಸ್ತಿತ್ವಕ್ಕೆ ಬರಲಿದೆ
- ಸದ್ಯ ವಿವಿಧ ವೈದ್ಯಕೀಯ ಕಾಲೇಜುಗಳು ವಿವಿಧ ಎಂಬಿಬಿಎಸ್ ಪರೀಕ್ಷಾ ಮಾದರಿಗಳನ್ನು ಅನುಸರಿಸುತ್ತಿವೆ. ಪರೀಕ್ಷಾ ಮಾದರಿಯಲ್ಲಿ ಏಕರೂಪತೆ ಮೂಲಕ ಶಿಕ್ಷಣ ಗುಣಮಟ್ಟ ಸಾಧಿಸುವುದು
- ಕೊನೆ ವರ್ಷದ ಎಂಬಿಬಿಎಸ್ ಪರೀಕ್ಷೆಯನ್ನು 'ನ್ಯಾಷನಲ್ ಎಕ್ಸಿಟ್ ಟೆಸ್ಟ್'(ನೆಕ್ಸ್ಟ್) ಎಂದು ಗಣನೆಗೆ ತೆಗೆದುಕೊಂಡು, ಇದನ್ನು ಸ್ನಾತಕೋತ್ತರ ಪದವಿಗೆ ಪ್ರವೇಶ ಅರ್ಹತಾ ಪರೀಕ್ಷೆಯೆಂದು ಪರಿಗಣಿಸುವುದು. ಹಾಗೂ ವೈದ್ಯ ವೃತ್ತಿ ಆರಂಭಿಸಲೂ ನೆಕ್ಸ್ಟ್ ಪ್ರಮುಖವಾಗಲಿದೆ
- ಖಾಸಗಿ ವೈದ್ಯಕೀಯ ಕಾಲೇಜುಗಳು ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಶುಲ್ಕ ಮತ್ತು ಶೇಕಡ 50 ಸೀಟುಗಳನ್ನು ನಿಯಂತ್ರಿಸಲಿದೆ